# ಶೇಖರ್ ಕಪೂರ್ ಹೊಸ ಹೊಣೆ



ಭಾರತದ ಅತ್ಯಂತ ಪ್ರತಿಷ್ಠಿತ ಸಿನಿಮಾ ತರಬೇತಿ ಸಂಸ್ಥೆಯಾದ ಎಫ್‌ಟಿಐಐ (ಫಿಲ್ಮ್ ಅಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಇಂಡಿಯಾ) ಮುಖ್ಯಸ್ಥರಾಗಿ ನಟ, ನಿರ್ದೇಶಕ, ನಿರ್ಮಾಪಕ ಶೇಖರ್ ಕಪೂರ್ ನೇಮಕಗೊಂಡಿದ್ದಾರೆ. ಬಾಲಿವುಡ್ ಮಾತ್ರವಲ್ಲ, ಭಾರತದ ಬಹುತೇಕ ಎಲ್ಲ ರಾಜ್ಯಗಳ ಚಿತ್ರರಂಗಕ್ಕೂ ಅನನ್ಯ ಕೊಡುಗೆಗಳನ್ನು ನೀಡಿರುವ ಸಂಸ್ಥೆಯಿದು. ಎಷ್ಟೊಂದು ನಿರ್ದೇಶಕರು, ನಟ ನಟಿಯರು ಮತ್ತು ತಂತ್ರಜ್ಞರು ಈ ಸಂಸ್ಥೆಯಲ್ಲಿ ಕಲಿತು ಭಾರತೀಯ ಮಾತ್ರವಲ್ಲ ಅಂತರರಾಷ್ಟ್ರೀಯ ಚಿತ್ರರಂಗವನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಹಿಂತಿರುಗಿ ಒಮ್ಮೆ ನೋಡಿದರೆ ಅಚ್ಚರಿಯಾಗುತ್ತದೆ. ಪುಣೆ ನಗರಕ್ಕೆ ಅಂತರರಾಷ್ಟ್ರೀಯ ಮಾನ್ಯತೆಯನ್ನು ಕೊಟ್ಟಿರುವ ಸಂಸ್ಥೆಯಿದು. ಹಿಂದೆ ಪ್ರಭಾತ್ ಫಿಲಂ ಕಂಪೆನಿ ಇದ್ದ ಜಾಗವದು. ಸಂಸ್ಥೆಗೆ 60 ತುಂಬಿರುವ ಈ ಸಂದರ್ಭದಲ್ಲಿ 74ರ 'ತರುಣ' ಶೇಖರ್ ಕಪೂರ್ ಅಧ್ಯಕ್ಷರಾಗಿ ಸಂಸ್ಥೆಯ ಚುಕ್ಕಾಣಿ ಹಿಡಿದಿದ್ದಾರೆ.

1961ರಲ್ಲಿ ಪುಣೆಯಲ್ಲಿ ಎಫ್‌ಟಿಐಐ ಸ್ಥಾಪನೆಯಾದಾಗ ಸಿನಿಮಾ ತರಬೇತಿಯಷ್ಟೇ ಇತ್ತು. ಟೆಲಿವಿಷನ್ ತರಬೇತಿ ಘಟಕವು ದೆಹಲಿಯಲ್ಲಿದ್ದು 1974ರಲ್ಲಿ ಅದೂ ಪುಣೆ ಕ್ಯಾಂಪಸ್‌ಗೆ ಸ್ಥಳಾಂತರಗೊಂಡಿತು. ಬಳಿಕ ಕೇಂದ್ರ ಸಂಸ್ಕೃತಿ ಇಲಾಖೆಯಿಂದ ಪೂರ್ಣ ಅನುದಾನದ ಸಂಸ್ಥೆಯಾಯಿತು. 2011ರಲ್ಲಿ ಕೇಂದ್ರ ಸರಕಾರವು ಎಫ್‌ಟಿಐಐ ಯನ್ನು ಅತ್ಯುನ್ನತ ಸಿನಿಮಾ ಕೇಂದ್ರವನ್ನಾಗಿ ರೂಪಿಸಲು ಸಂಸತ್ತಿನಲ್ಲಿ ಕಾಯ್ದೆಯೊಂದನ್ನು ತಂದಿತು. ಆಗ ಸಂಸ್ಕೃತಿ ಸಚಿವೆ ಆಗಿದ್ದವರು ಅಂಬಿಕಾ ಸೋನಿ. ಆ ಬಳಿಕ ಇದೊಂದು ಶೈಕ್ಷಣಿಕ ಕೇಂದ್ರವಾಗಿ, ಸಿನಿಮಾ ಯೂನಿವರ್ಸಿಟಿಯಾಗಿ ಬಲಗೊಂಡಿತು.

ಇವತ್ತು 60ರ ಹರೆಯದಲ್ಲಿ ಎಫ್‌ಟಿಐಐ, ಜಾಗತಿಕ ಮನ್ನಣೆಯ ಸಂಸ್ಥೆಯಾಗಿ ಬೆಳೆದುನಿಂತಿದ್ದರೆ, ಅದಕ್ಕೆ ಕಾರಣ ಸಂಸ್ಥೆಗೆ ಕಾಲಕಾಲಕ್ಕೆ ನೇಮಕವಾದ ಹಲವಾರು ಅಧ್ಯಕ್ಷರು. ರೋಶನ್ ತನೇಜಾ ಅವರಿಂದ ಮೊದಲ್ಗೊಂಡು ಆರ್.ಕೆ.ಲಕ್ಷ್ಮಣ್, ಶ್ಯಾಮ್ ಬೆನೆಗಲ್, ಮೃಣಾಲ್ ಸೇನ್, ಅಡೂರ್ ಗೋಪಾಲಕೃಷ್ಣನ್, ಮಹೇಶ್ ಭಟ್, ಗಿರೀಶ್ ಕಾರ್ನಾಡ್, ಯು.ಆರ್. ಅನಂತಮೂರ್ತಿ, ಸಯೀದ್ ಅಖ್ತರ್ ಮಿರ್ಜಾ ಮುಂತಾದ ಅತಿರಥರೆಲ್ಲ ಇಲ್ಲಿ ಮುಖ್ಯಸ್ಥರಾಗಿ ಕೆಲಸ ಮಾಡಿದ್ದು ಸಂಸ್ಥೆ ಜಾಗತಿಕ ಮಟ್ಟಕ್ಕೇರಲು ಕಾರಣವಾಯಿತು. ಇತ್ತೀಚಿನ ವರ್ಷಗಳಲ್ಲಿ ಸಕ್ರಿಯ ರಾಜಕೀಯದಲ್ಲಿ ಇದ್ದವರನ್ನು, ಆಳುವ ಪಕ್ಷಕ್ಕೆ ಬಹಿರಂಗ ನಿಷ್ಠೆ ಪ್ರಕಟಿಸಿದವರನ್ನು ಅಧ್ಯಕ್ಷರನ್ನಾಗಿಸುವ ಪ್ರವೃತ್ತಿ ಬೆಳೆದದ್ದು ಸಂಸ್ಥೆಯಲ್ಲಿ ವಿವಾದದ ಕಿಡಿಯನ್ನೂ ಹೊತ್ತಿಸಿದ್ದುಂಟು.

ಸೃಜನಶೀಲ ಅಧ್ಯಕ್ಷರು ಬಂದಾಗಲೆಲ್ಲ ಎಫ್‌ಟಿಐಐ ನಲ್ಲಿ ಕಲಿಸುವವರೂ ಅತಿರಥರಿದ್ದರು. ಡೇವಿಡ್ ಲೀನ್, ಇಸ್ತ್ವಾನ್ ಗಾಲ್, ಮಣಿ ಕೌಲ್, ಋತ್ವಿಕ್ ಘಟಕ್, ಸತ್ಯಜಿತ್ ರೇ, ಟಾಮ್ ಆಲ್ಟರ್ ಮುಂತಾದ ಇಲ್ಲಿಯ ಫ್ಯಾಕಲ್ಟಿಗಳನ್ನು ಇಲ್ಲಿ ಕಲಿತವರು ಈಗಲೂ ನೆನಪಿಸಿಕೊಳ್ಳುತ್ತಾರೆ. ಹಾಗೆಂದೇ ಭಾರತೀಯ ಚಿತ್ರರಂಗದ ಇವತ್ತಿನ ಅತ್ಯುತ್ತಮ ಪ್ರತಿಭೆಗಳ ಪಟ್ಟಿ ಮಾಡಿದರೆ ಇಲ್ಲಿನ ವಿದ್ಯಾರ್ಥಿಗಳೇ ದೊಡ್ಡ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಅಡೂರ್ ಅವರೂ ಒಂದು ಕಾಲದಲ್ಲಿ ಇಲ್ಲಿನ ವಿದ್ಯಾರ್ಥಿಯೇ. ಬಾಲು ಮಹೇಂದ್ರ, ಗಿರೀಶ್ ಕಾಸರವಳ್ಳಿ, ಜಾಹ್ನು ಬರೂವಾ, ಮಣಿ ಕೌಲ್, ಮಧು ಅಂಬಟ್, ನಾಸಿರುದ್ದೀನ್ ಶಾ, ಓಂಪುರಿ, ರಾಜ್‌ಕುಮಾರ್ ಹಿರಾನಿ, ರಸೂಲ್ ಪೂಕುಟ್ಟಿ, ಶಾಜಿ ಎನ್ ಕರುಣ್, ಸ್ಮಿತಾ ಪಾಟೀಲ್ ಮುಂತಾಗಿ ಇಲ್ಲಿಯ ವಿದ್ಯಾರ್ಥಿಗಳಾಗಿದ್ದ ಖ್ಯಾತನಾಮರ ಪಟ್ಟಿಯೂ ದೊಡ್ಡದಿದೆ.

ಸ್ವತಂತ್ರ ಧೋರಣೆಯ ಕಾರಣದಿಂದ ದೇಶದ ಹಲವು ಪ್ರತಿಷ್ಠಿತ ಯೂನಿವರ್ಸಿಟಿಗಳು ಆಳುವವರ ಕೆಂಗಣ್ಣಿಗೆ ಗುರಿಯಾಗುತ್ತಿರುವ ಕಾಲವಿದು. ಶೇಖರ್ ಕಪೂರ್ ಅವರ ಮೇಲೆ ಈಗ ಬಿದ್ದಿರುವ ಜವಾಬ್ದಾರಿ ದೊಡ್ಡದೇ. ಈ ವಯಸ್ಸಿನಲ್ಲಿ ಅವರು ಅದನ್ನು ಹೇಗೆ ನಿರ್ವಹಿಸುತ್ತಾರೆ ಎನ್ನುವುದು ಗಮನಿಸಬೇಕಾದ ಸಂಗತಿ. ನಿರ್ಮಾಪಕ, ನಿರ್ದೇಶಕರಾಗಿ ಶೇಖರ್ ಕಪೂರ್ ಅವರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರಿದೆ. 80ರ ದಶಕದಲ್ಲಿ ಟಿವಿಯಲ್ಲಿ ಅತ್ಯಂತ ಜನಪ್ರಿಯವಾದ 'ಖಾನ್‌ದಾನ್' ಎನ್ನುವ ಧಾರವಾಹಿಯಲ್ಲಿ ನಟನಾಗಿ ಚಿತ್ರರಂಗ ಪ್ರವೇಶಿಸಿದವರು ಅವರು. ಅದಕ್ಕೆ ಕಾರಣ ಅವರ ಸ್ಫುರದ್ರೂಪವೂ ಇರಬಹುದು. ಆದರೆ ಇವತ್ತು ಅವರನ್ನು ಸಿನಿಮಾ ಜಗತ್ತು ಗುರುತಿಸುವುದೇ ನಿರ್ದೇಶಕರಾಗಿ.

1983ರಲ್ಲಿ ಶೇಖರ್ ಕಪೂರ್ ನಿರ್ದೇಶನ ಮಾಡಿದ 'ಮಾಸೂಮ್', ಚಿತ್ರರಂಗದಲ್ಲಿ ಕಲ್ಟ್ ಸಿನಿಮಾ ಎನ್ನಿಸಿಕೊಂಡಿತು. ಫಿಲಂಫೇರ್ ವಿಮರ್ಶಕರ ಪ್ರಶಸ್ತಿಯನ್ನೂ ಗೆದ್ದುಕೊಂಡಿತು. ನಾಲ್ಕು ವರ್ಷಗಳ ಬಳಿಕ ನಿರ್ದೇಶಿಸಿದ 'ಮಿಸ್ಟರ್ ಇಂಡಿಯಾ' ಪಕ್ಕಾ ಕಮರ್ಷಿಯಲ್ ಚಿತ್ರವಾಗಿ ಹಣ ಬಾಚಿತು. ಶೇಖರ್ ಕಪೂರ್‌ಗೆ ನಿಜಕ್ಕೂ ದೊಡ್ಡ ಹೆಸರು ತಂದುಕೊಟ್ಟ ಸಿನಿಮಾ 'ಬ್ಯಾಂಡಿಟ್ ಕ್ವೀನ್'. ಶೋಷಣೆಯ ವಿರುದ್ಧ ಸಿಡಿದೆದ್ದು ಡಕಾಯಿತೆಯಾಗಿ ಕುಖ್ಯಾತಿ ಹೊಂದಿದ 'ಫೂಲನ್ ದೇವಿ'ಯ ಆತ್ಮಕತೆಯನ್ನು ಬರೆದಾಕೆ ಮಾಲಾ ಸೇನ್. ಅದನ್ನೇ ಇಟ್ಟುಕೊಂಡು ಶೇಖರ್ ಕಪೂರ್ ಮಾಡಿದ ಸಿನಿಮಾ 'ಬ್ಯಾಂಡಿಟ್ ಕ್ವೀನ್'. ಈ ಹಿಂದಿ ಚಿತ್ರ ಅತ್ಯುತ್ತಮ ಚಿತ್ರ ಎಂಬ ರಾಷ್ಟ್ರಪ್ರಶಸ್ತಿ ಅಲ್ಲದೆ, 'ಫಿಂಫೇರ್'ನ ಅತ್ಯುತ್ತಮ ನಿರ್ದೇಶಕ ಮತ್ತು ವಿಮರ್ಶಕರ ಪ್ರಶಸ್ತಿಯನ್ನೂ ಗೆದ್ದಿತು. 1994ರ ಕೇನ್ಸ್ ಫಿಲ್ಮ್ ಫೆಸ್ಟಿವಲ್‌ನಲ್ಲೂ ಪ್ರದರ್ಶನ ಕಂಡಿತು. 1998ರಲ್ಲಿ ನಿರ್ದೇಶಿಸಿದ 'ಕ್ವೀನ್ ಎಲಿಜಬೆತ್' ಸಿನಿಮಾಕ್ಕೆ ಬಾಫ್ಟಾ ಪ್ರಶಸ್ತಿ ಸಿಕ್ಕಿತು. 2007ರಲ್ಲಿ 'ಎಲಿಜಬೆತ್: ದಿ ಗೋಲ್ಡನ್ ಏಜ್' ಸಿನಿಮಾ ಬಿಡುಗಡೆಯಾಯಿತು. ಎರಡೂ ಚಿತ್ರಗಳು ಆಸ್ಕರ್‌ಗೆ ಎಂಟ್ರಿ ಪಡೆದು ಸುದ್ದಿ ಮಾಡಿದವು.

ಆತ್ಮಹತ್ಯೆ ಮಾಡಿಕೊಂಡು ಈಗ ಸುದ್ದಿಯಲ್ಲಿರುವ ನಟ ಸುಶಾಂತ್ ಸಿಂಗ್, ಶೇಖರ್ ಕಪೂರ್ ನಿರ್ದೇಶನದ 'ಪಾನಿ' ಚಿತ್ರದಲ್ಲಿ ಎರಡು ವರ್ಷದ ಹಿಂದೆ ನಟಿಸಿದ್ದರು. ಆದರೆ ಚಿತ್ರದ ನಿರ್ಮಾಣದ ಹೊಣೆ ಹೊತ್ತಿದ್ದ ಯಶ್‌ರಾಜ್ ಫಿಲಂಸ್ ಯೋಜನೆಯಿಂದ ಹೊರಬಿದ್ದ ಬಳಿಕ ಚಿತ್ರ ಅರ್ಧಕ್ಕೇ ನಿಂತಿತು. ಅರ್ಧ ಸಿದ್ಧವಾದ ಚಿತ್ರವನ್ನು ಹಾಗೂ ಚಿತ್ರಕಥೆಯನ್ನು ಶೇಖರ್ ಕಪೂರ್ ಬಿಡುಗಡೆ ಮಾಡಿದ್ದೂ ಸುದ್ದಿ ಆಯಿತು. ಮೇಧಾ ಗುಜ್ರಾಲ್ ಅವರನ್ನು 84ರಲ್ಲಿ ಮದುವೆಯಾಗಿ ಹತ್ತು ವರ್ಷಗಳ ಬಳಿಕ ಡೈವೋರ್ಸ್ ಮಾಡಿದ ಶೇಖರ್‌ಕಪೂರ್, ಬಳಿಕ ಗಾಯಕಿ ಸುಚಿತ್ರಾ ಕೃಷ್ಣಮೂರ್ತಿ ಅವರನ್ನು ಮದುವೆಯಾಗಿದ್ದರು. ಆದರೆ ಅದೂ ಡೈವೋರ್ಸ್‌ನಲ್ಲಿ ಅಂತ್ಯ ಕಂಡಿತು. ಲಾಹೋರ್‌ನಲ್ಲಿ ಜನಿಸಿದ ಶೇಖರ್, ಖ್ಯಾತ ನಟ ದೇವಾನಂದ್ ಅವರ ಅಳಿಯ ಎನ್ನುxವುದು ಅಷ್ಟು ಪ್ರಚಾರ ಪಡೆದ ಸಂಗತಿಯಲ್ಲ. ಈಗ ಹೊಸ ಹೊಣೆ ಸಿಕ್ಕಿದೆ. ಏನು ಹೊಸತನ್ನು ಮಾಡುತ್ತಾರೋ ನೋಡಬೇಕು.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65